**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,**
**ಚಿಕ್ಕಮಗಳೂರು**

ಸತ್ರ ಮೊಕದ್ದಮೆ ನಂಃ **29/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಕಿರಣ್ ಕುಮಾರ್ | ಪಿಡಬ್ಲೂ - 8 |
| ತಂದೆಯ ಹೆಸರು | - | ಪುಟ್ಟರಾಜೇಗೌಡ | ಸಿಡಬ್ಲೂ - 39 |
| ವಯಸ್ಸು | - | 30 ವರ್ಷ | |
| ಉದ್ಯೋಗ | - | ಪಿ ಎಸ್ ಐ ,<br>ಸಖರಾಯಪಟ್ಟಣ ಪೊಲೀಸ್ ಠಾಣೆ | |
| ವಾಸ ಸ್ಥಳ | - | ಸಖರಾಯಪಟ್ಟಣ. | |

ದಿನಾಂಕಃ 21.02.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು ದಿನಾಂಕ 20.10.2022 ರಿಂದ 22.06.2023 ರವರೆಗೆ ಜಯಪುರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕಾರ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 16.11.2022 ರಂದು ನಾನು ಠಾಣೆಯಲ್ಲಿದ್ದ ಸಮಯದಲ್ಲಿ ಮ.12.30 ಗಂಟೆಗೆ ಫ್ರಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆ **50/2022** ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.1 ಎಂದು

ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ನಾನು ದಾಖಲು ಮಾಡಿದ್ದ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು,ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2 (ಬಿ) ಎಂದು ಗುರುತಿಸಲಾಯಿತು. ಪ್ರಕರಣವು ಘೋರ ಅಪರಾಧವನ್ನು ಒಳಗೊಂಡಿದ್ದರಿಂದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.40 ರವರಿಗೆ ನೀಡಿರುತ್ತೇನೆ.

3. ಅದೇ ದಿನ ಚಾಸಾ.40 ರವರು ಆರೋಪಿಯ ಪತ್ತೆ ಹಚ್ಚುವಂತೆ ಮೌಖಿಕವಾಗಿ ಆದೇಶಿಸಿರುತ್ತಾರೆ. ಅದರಂತೆ ನಾನು ಅದೇ ದಿನ ರಾತ್ರಿ 9.15 ಗಂಟೆಗೆ ನಾನು ಆರೋಪಿಯನ್ನು ಬಸರೀಕಟ್ಟೆ ಸಮೀಪದ ಎಂ.ಎಸ್ ಎಸ್ಟೇಟ್ ನ ಕೂಲಿ ಲೈನ್ ರಸ್ತೆಯಲ್ಲಿ ವಶಕ್ಕೆ ಪಡೆದು, ಅದೇ ದಿನ ರಾತ್ರಿ 9.45 ಗಂಟೆಗೆ ಆತನನ್ನು ಚಾಸಾ.40 ರವರ ಮುಂದೆ ಹಾಜರುಪಡಿಸಿ ವರದಿ ನೀಡಿರುತ್ತೇನೆ. ಸದರಿ ವರದಿಯನ್ನು ನೋಡುತ್ತಿದ್ದು, ಅದರನ್ನು ನಿಪಿ.29 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.29(ಎ) ಎಂದು ಗುರುತಿಸಲಾಯಿತು.

4. ಸಾಕ್ಷಿಯು ಈ ದಿನ ವಿಡಿಯೋ ಕಾನ್ಫರೆನ್ಸಿಂಗ್ ಮೂಖಾಂತರ ಹಾಜರುಪಡಿಸಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ **LADCS** ನ **Deputy Chief Defense counsel** ಆದ ಶ್ರೀ ಎನ್ ಡಿ ವಕೀಲರಿಂದಃ ಆರೋಪಿ ಪರವಾಗಿಃ</u>

5. ಫ್ರಾಸಾ.1 ರವರು ಠಾಣೆಗೆ ಹಾಜರಾಗಿ ದೂರು ನೀಡುವ

ಪೂರ್ವದಲ್ಲಿ ಯಶೋಧಾಳ ಸಾವಿನ ಬಗ್ಗೆ ನಮಗೆ ಮಾಹಿತಿ ಬಂದಿತ್ತು. ಆ ರೀತಿ ನಿಮಗೆ ಮಾಹಿತಿ ನೀಡಿದವರು ಯಾರು ಮತ್ತು ನಿಮಗೆ ಯಾವ ರೀತಿ ಮಾಹಿತಿ ಬಂದಿತ್ತು ಎಂದರೆ ಸಾಕ್ಷಿ ಯಾರೋ ಹೇಳಿದ್ದರು ಎನ್ನುತ್ತಾರೆ. ಆ ರೀತಿ ನಿಮಗೆ ಮಾಹಿತಿ ಬಂದಾಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಫ್ರಾಸಾ.1 ರವರು ದೂರನ್ನು ಠಾಣೆಗೆ ಬಂದು ತಯಾರಿಸಿದರೇ ಅಥವಾ ಮೊದಲೇ ತಯಾರಿಸಿ ತಂದಿದ್ದರೇ ಎಂದರೆ ನನಗೆ ನೆನಪಿಲ್ಲ ಎನ್ನುತ್ತಾರೆ. ನಿಮಗೆ ಯಶೋಧಾಳ ಸಾವಿನ ಬಗ್ಗೆ ಮೊದಲೇ ಮಾಹಿತಿ ಬಂದಿದ್ದರಿಂದ ನೀವು ಫ್ರಾಸಾ.1 ರವರಿಗೆ ಇದೇ ರೀತಿ ದೂರನ್ನು ನೀಡಬೇಕು ಎಂದು ಹೇಳಿ ಬರೆಸಿದ್ದೀರಿ ಎಂದರೆ ಸರಿಯಲ್ಲ.

6. ಆರೋಪಿ ಯಾವುದೇ ತಪ್ಪನ್ನು ಮಾಡದಿದ್ದರೂ ಸಹ ನೀವು ಫ್ರಾಸಾ.1 ರವರಿಂದ ಸುಳ್ಳು ದೂರನ್ನು ಪಡೆದುಕೊಂಡು ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯ ಪತ್ತೆಗೆ ಹೋಗಿದ್ದಾಗಿ ಹೇಳಿದ್ದೀರಿ ಆಗ ನಿಮಗೆ ಆತನ ಪೋಟೋ ಅಥವಾ ಮುಖಚಹರೆಯ ಬಗ್ಗೆ ಮಾಹಿತಿ ಇತ್ತೇ ಎಂದರೆ ಸಾಕ್ಷಿ ಸ್ಥಳಿಯರಿಂದ ಮಾಹಿತಿ ತಿಳಿದಿತ್ತು ಎನ್ನುತ್ತಾರೆ.

7. ಎಂ.ಎಸ್ ಎಸ್ಟೇಟ್ ನ ಕೂಲಿ ಲೈನ್ ಮನೆಯಲ್ಲಿದ್ದ ಆರೋಪಿಯನ್ನು ವಶಕ್ಕೆ ಪಡೆದಿದ್ದರೂ ಸಹ ಆತ ನಿಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದ್ದಾಗಿ ಸುಳ್ಳು ವರದಿಯನ್ನು ನೀಡಿದ್ದೀರಿ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಯಾವುದೇ ಕರ್ತವ್ಯ ನಿರ್ವಹಿಸದಿದ್ದರೂ ಸಹ ಮೇಲಾಧಿಕಾರಿಗಳ ಮಾತು

ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ